DEEDS
# ಸಂವಾದ
ಸಮತೆಯ ಸಮಾಜದೆಡೆಗೆ

ಸಂವಾದ 21

ಖಾಸಗಿ ಪ್ರಸಾರಕ್ಕಾಗಿ ಮಾತ್ರ

## ನಿರ್ದೇಶಕರ ಮಾತು

ಡೀಡ್ಸ್ (ಡೆವಲಪ್‌ಮೆಂಟ್ ಎಜುಕೇಶನ್ ಸರ್ವಿಸ್) ಸಂಸ್ಥೆಯು ಅಭಿವೃದ್ಧಿ ಕ್ಷೇತ್ರದಲ್ಲಿ ಕಳೆದ 38 ವರುಷಗಳಿಂದ ತೊಡಗಿಕೊಂಡಿರುವ ಒಂದು ಸ್ವಯಂ ಸೇವಾ ಸಂಸ್ಥೆಯಾಗಿದೆ. ದಿವಂಗತ ಡೆಸ್ಮೆಂಡ್ ಡಿ' ಅಬ್ರಿಯೋ ಮತ್ತು ಅವರ ಪತ್ನಿ ಮಾರ್ಗರೆಟ್ ಡಿ' ಅಬ್ರಿಯೋರವರಿಂದ ಮಂಗಳೂರಿನಲ್ಲಿ ಕಾರ್ಯಾರಂಭವಾದ ಸಂಸ್ಥೆಯು ಆರಂಭದಲ್ಲಿ ಅವಿಭಜಿತ ದಕ್ಷಿಣ ಕನ್ನಡದಲ್ಲಿ ತನ್ನ ಕಾರ್ಯವ್ಯಾಪ್ತಿಯನ್ನು ಹೊಂದಿದ್ದು, ಆ ನಂತರದಲ್ಲಿ ತನ್ನ ಕಾರ್ಯಚಟುವಟಿಕೆಗಳನ್ನು ಕರ್ನಾಟಕದಾದ್ಯಂತ ವಿಸ್ತರಿಸಿದೆ. ಶ್ರೀಮತಿ ಮರ್ಲಿನ್ ಮಾರ್ಟಿಸ್‌ರವರು ಸಂಸ್ಥೆಯ ನಿರ್ದೇಶಕರಾಗಿದ್ದಾರೆ. ಲಿಂಗ ತಾರತಮ್ಯ, ಬಹು ಬಗೆಯ ಸಾಮಾಜಿಕ ಅನ್ಯಾಯಗಳು ಇತ್ಯಾದಿಗಳ ವಿರುದ್ಧ ಮಹಿಳೆಯರಲ್ಲಿ ಜಾಗೃತಿ ಮೂಡಿಸಿ ತಮ್ಮ ಹಕ್ಕುಗಳ ಪರವಾಗಿ ಹೋರಾಡಲು ಅನುವಾಗುವಂತೆ ಅವರನ್ನು ಸಂಘಟಿಸಿದೆ. ತರಬೇತಿಗಳಿಗೆ ಪೂರಕವಾಗಿ ಮಹಿಳಾ ಹಕ್ಕುಗಳನ್ನು ಕುರಿತ ಹಾಗೂ ಲಿಂಗ ಸಮಾನತೆಯನ್ನು ಸಾರುವ ಸಮೃದ್ಧ ಸಂಪನ್ಮೂಲಗಳನ್ನು ಡೀಡ್ಸ್ ಕ್ರೋಡೀಕರಿಸಿದೆ. ಲಿಂಗತ್ವ ಪರಿಕಲ್ಪನೆಯ ಸಂವೇದಿ ದ್ವೈಮಾಸಿಕ ಪತ್ರಿಕೆಯನ್ನು, ಮೌಲಿಕ ಶೈಕ್ಷಣಿಕ ಸಾಹಿತ್ಯಗಳನ್ನೂ ಹೊರತಂದಿದೆ. ಮಹಿಳೆಯರನ್ನು ಕುರಿತ ಸಮಾಜದ ಮನೋಭೂಮಿಕೆಯನ್ನು ಬದಲಿಸುವ ಕುರಿತು ಪೂರಕ ಕಾನೂನು ಮಹಿಳಾ ತರಬೇತುದಾರರನ್ನು ಸಂಘಟಿಸಿ ಮಹಿಳಾ ತರಬೇತುದಾರರ ಕೊರತೆಯನ್ನು ನೀಗಿಸಲು ಸುಗಮಕಾರರನ್ನು ರೂಪಿಸುತ್ತಿದೆ. 'ಕರ್ನಾಟಕ ರಾಜ್ಯ ಮಹಿಳಾ ತರಬೇತುದಾರರ ಸಂಚಲನ' ಎಂಬ ತರಬೇತುದಾರರ ತಂಡವೊಂದು ಈಗಾಗಲೇ ರೂಪುಗೊಂಡಿದೆ. ಈ ಬಾರಿ ಉತ್ತರ ಕನ್ನಡ, ಧಾರವಾಡ, ಬಾಗಲಕೋಟೆ, ಬಳ್ಳಾರಿ ಜಿಲ್ಲೆಗಳನ್ನು ತನ್ನ ಕಾರ್ಯಕ್ಷೇತ್ರವಾಗಿ ಆರಿಸಿಕೊಂಡು ತಳಮಟ್ಟದಲ್ಲಿ ಕಾನೂನು ಜಾಗೃತಿಯನ್ನು ಮೂಡಿಸಲು ಯೋಜಿಸಿದೆ. ನಮ್ಮ ಕೆಲಸಗಳು ದಾಖಲಾಗಿ ಅವು ಲೋಕಾಂತಗೊಳ್ಳಬೇಕು, ನಮ್ಮ ನಡುವೆ ಒಂದು ಅರ್ಥಪೂರ್ಣ ಸಂವಹನ–ಸಂವಾದ ಸಾಧ್ಯವಾಗಿ, ಮಾಹಿತಿಗಳು ತಳಮಟ್ಟಕ್ಕೆ ವಿಸ್ತರಿಸಬೇಕು ಎಂಬ ಆಶಯದಿಂದ ಡೀಡ್ಸ್ ಈ ಸಂವಾದವನ್ನು ಹೊರತರುತ್ತಿದೆ. ಇದು ಸಮತೆಯೆಡೆಗಿನ ನಮ್ಮ ನಡಿಗೆಯನ್ನು ಸ್ಪಷ್ಟಪಡಿಸಿಕೊಳ್ಳುವ, ಗಟ್ಟಿಗೊಳಿಸಿಕೊಳ್ಳುವ, ಸಂವಾದ ನಡೆಸುವ ಒಂದು ಪುಟ್ಟ ವೇದಿಕೆ. ಸಂವಾದ ನಡೆಸುವುದು ಒಬ್ಬರಿಂದಲೇ ಸಾಧ್ಯವಿಲ್ಲ, ಅದಕ್ಕೆ ಹಲವು ದನಿಗಳಿದ್ದರೇ ಚೆಂದ ಎಂದೇ ನಮ್ಮ ಅನಿಸಿಕೆ. ತಮ್ಮ ಅನುಭವ, ವಿಮರ್ಶೆಗಳನ್ನು ಸಂವಾದದೊಂದಿಗೆ ಹಂಚಿಕೊಳ್ಳಿ. ಮಹಿಳೆಯರ ಬದುಕನ್ನು ತೆರೆದಿಡುವ, ಅವರಿಗೆ ಸ್ಫೂರ್ತಿ ನೀಡುವ ಲೇಖನಗಳು, ಯಶೋಗಾಥೆಗಳು, ವರದಿಗಳು, ಕವನ, ನೀವು ಮಾಡಿದ ತರಬೇತಿಗಳ ಚಿತ್ರಸಹಿತವಾದ ವರದಿ ಇತ್ಯಾದಿಗಳನ್ನು ನಮಗೆ ಕಳುಹಿಸಿಕೊಡಿ. ಈ ಸಂಚಿಕೆಯನ್ನು ನೀವೂ ಓದಿ, ಇತರರಿಗೂ ಓದಿಸಿ.



**ಮರ್ಲಿನ್ ಮಾರ್ಟಿಸ್**

## 2016–2019 ರ ಡೀಡ್ಸ್ ಪೂರಕ ಕಾನೂನು ಯೋಜನೆಯ ಸಾಧನೆಗಳು

- ದಕ್ಷಿಣ ಕನ್ನಡ, ಉಡುಪಿ, ಚಿತ್ರದುರ್ಗ, ಬಳ್ಳಾರಿ, ಗದಗ, ಮಂಡ್ಯ ಜಿಲ್ಲೆಯ ಹಿಂದಿನ 39 ಸುಗಮಕಾರರು ಮುಖ್ಯ ತರಬೇತುದಾರರಾಗಿ ಲಭ್ಯವಿದ್ದು, ಅವರು ಆ ಜಿಲ್ಲೆಗಳಲ್ಲಿ ತಳಮಟ್ಟದಲ್ಲಿ ಕಾನೂನಿನ ಅರಿವನ್ನು ಮೂಡಿಸುತ್ತಿದ್ದಾರೆ ಮತ್ತು ಮಹಿಳೆಯರ ಪ್ರಕರಣಗಳನ್ನು ನಿರ್ವಹಿಸುತ್ತಿದ್ದಾರೆ. ಈ ಸುಗಮಕಾರರು ಒಟ್ಟು 116 ಹೊಸ ಸುಗಮಕಾರರಿಗೆ ತರಬೇತಿ ನೀಡಿದ್ದು, ಅವರು ಕಾನೂನಿನ ಅರಿವನ್ನು ಮೂಡಿಸುತ್ತಿದ್ದಾರೆ ಮತ್ತು ಮಹಿಳೆಯರ ಪ್ರಕರಣಗಳನ್ನು ನಿರ್ವಹಿಸುತ್ತಿದ್ದಾರೆ. ಒಟ್ಟಾರೆಯಾಗಿ 5072 ಮಂದಿಗೆ ಲಿಂಗತ್ವ ಮತ್ತು ಕಾನೂನಿನ ಅರಿವನ್ನು ನೀಡಿರುತ್ತಾರೆ.
- ಗದಗ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ 69 ಪೂರಕ ಕಾನೂನು ಸುಗಮಕಾರರು ಲಭ್ಯವಿದ್ದು, ಅವರು ಒಟ್ಟು ಮೂರು ಹಂತಗಳಲ್ಲಿ 738 ಕಾರ್ಯಕ್ರಮಗಳನ್ನು ಸಂಘಟಿಸಿ 5855 ಮಂದಿಗೆ ಅರಿವನ್ನು ಮೂಡಿಸಿರುತ್ತಾರೆ. ಈ 5855 ಮಂದಿ 59,200 ಕುಟುಂಬಗಳಿಗೆ ಮಾಹಿತಿ ಮತ್ತು ಮಾಹಿತಿ ಸಾಮಗ್ರಿಗಳನ್ನು ಒದಗಿಸಿರುತ್ತಾರೆ.
- ಗದಗ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಒಂದೊಂದು ದಿನದ ಪೂರಕ ಕಾನೂನು ಸುಗಮಕಾರರ/ತಳಮಟ್ಟದ ಭಾಗಾರ್ಥಿಗಳ ಸಮಾವೇಶ ನಡೆದಿದ್ದು, ಒಟ್ಟು 39 ಸುಗಮಕಾರರು, 303 ಭಾಗಾರ್ಥಿಗಳು, ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಿರುತ್ತಾರೆ.
- ಗದಗ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ 33 ಸುಗಮಕಾರರು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಿಂದ ಪಾರಾ ಲೀಗಲ್ ಸ್ವಯಂಸೇವಕರಾಗಿ ಆಯ್ಕೆಯಾಗಿರುತ್ತಾರೆ.
- ಗದಗ ಮತ್ತು ಕೊಪ್ಪಳ ಜಿಲ್ಲೆಗಳ ಅರಿವಿನ ಕಾರ್ಯಕ್ರಮಗಳಿಂದಾಗಿ 40 ಯಶೋಗಾಥೆಗಳು ದಾಖಲಿಸಲ್ಪಟ್ಟಿವೆ.
- ಕಳೆದ ಮೂರು ವರುಷಗಳಲ್ಲಿ ಮಂಗಳೂರಿನ ಡೀಡ್ಸ್ ಕಾನೂನು ನೆರವು ಕೇಂದ್ರವು 106 ಮಹಿಳೆಯರ ಪ್ರಕರಣಗಳನ್ನು ನಿರ್ವಹಿಸಿ, ಅವರಿಗೆ ನ್ಯಾಯಿಕ ಸಹಾಯವನ್ನು ಮಾಡಿದೆ.
- ಕೊಪ್ಪಳ, ದಕ್ಷಿಣ ಕನ್ನಡ, ಚಿತ್ರದುರ್ಗ, ಬಳ್ಳಾರಿ, ಗದಗ, ಮಂಡ್ಯ ಜಿಲ್ಲೆಗಳಲ್ಲಿ ಪೂರಕ ಕಾನೂನು ಸುಗಮಕಾರರ ವೇದಿಕೆ ರಚನೆಯಾಗಿದ್ದು, ಅದು ಸ್ವತಂತ್ರವಾಗಿ ಮುಂದುವರಿಯುತ್ತಿದೆ. ಜತೆಗೆ ಕರ್ನಾಟಕ ರಾಜ್ಯ ಪೂರಕ ಕಾನೂನು ಸುಗಮಕಾರರ ವೇದಿಕೆಯೂ ರಚನೆಯಾಗಿದ್ದು, ಅದೂ ಸ್ವತಂತ್ರವಾಗಿ ಮುಂದುವರಿಯುತ್ತಿದೆ.

# ಡೀಡ್ಸ್ ಕಾನೂನು ಜಾಗೃತಿ ಯೋಜನೆ 2020–2022

ದ್ಯಾಮವ್ವನ ಮಗಳು ಪ್ರಾಯಕ್ಕೆ ಬಂದಿದ್ದಾಳೆ. 16 ವರುಷ ತುಂಬಿದ ತಕ್ಷಣ ಮದುವೆ ಮಾಡುವ ಯೋಚನೆಯನ್ನು ಮನೆಯವರು ಮಾಡುತ್ತಿದ್ದಾರೆ. 18 ವರುಷದೊಳಗೆ ಮದುವೆ ಮಾಡಬಾರದೆನ್ನುವ ಮಾಹಿತಿ ಆಕೆಗೆ ಇದ್ದರೂ ಮದುವೆ ಮಾಡಿದರೆ ಆಗುವ ದೈಹಿಕ–ಮಾನಸಿಕ ಅರೋಗ್ಯದ ಮೇಲೆ ಆಗುವ ಪರಿಣಾಮದ ಮಾಹಿತಿ ಆಕೆಗಿಲ್ಲ. ರತ್ನಾಳ ಗ್ರಾಮದಲ್ಲಿ ಹಲವು ಬಾಲ್ಯವಿವಾಹಗಳು ನಡೆದಿವೆ, ಸಂಬಂಧಿತ ಮನೆಯವರಿಗೆ, ಪೊಲೀಸರಿಗೆ ಖುದ್ದು ದೂರು ಕೊಡಲು ಹೋಗಿ ಗ್ರಾಮಸ್ಥರಿಂದ, ಮನೆಯವರಿಂದ ಛೀಮಾರಿ ಹಾಕಿಸಿಕೊಂಡಿದ್ದಾಳೆ. ದೂರು ಕೊಡಲು ಸಹಾಯವಾಣಿ ಆಕೆಗೆ ಗೊತ್ತಿಲ್ಲ. ಗೀತಾ ತನ್ನ ಗಂಡನಿಂದ ವಿಚಿತ್ರ ಹಿಂಸೆಗಳನ್ನು ದಿನನಿತ್ಯ ಅನುಭವಿಸುತ್ತಿರುವವಳು. ಯಾರಲ್ಲೂ ಹೇಳಿಕೊಳ್ಳದೆ, ಏನು ಮಾಡುವುದೆಂದು ಗೊತ್ತಾಗದೆ ಅಸಹಾಯಕಳಾಗಿದ್ದಾಳೆ. ಹೀಗೆ ಮಹಿಳೆಯರ ನೋವಿನ ಕತೆಗಳಿಗೆ ಕೊನೆಯಿಲ್ಲ. ಸರಿಯಾದ ಸಮಯದಲ್ಲಿ ಸರಿಯಾದ ರೀತಿಯಲ್ಲಿ ಸರಿಯಾದ ಮಾಹಿತಿಗಳು ಸಿಕ್ಕರೆ ಜನರು ತಮ್ಮ ಮೇಲಾಗುವ ಶೋಷಣೆಗಳನ್ನು ಮೆಟ್ಟಿ ನಿಲ್ಲಲು ಮುಂದಡಿಯಿಡುತ್ತಾರೆ ಎಂಬುದನ್ನು ಡೀಡ್ಸ್ ತನ್ನ ಕಾರ್ಯಕ್ಷೇತ್ರದ ಅನುಭವಗಳಿಂದ ಕಂಡುಕೊಂಡಿದೆ.

ಈ ಹಿನ್ನೆಲೆಯಲ್ಲೇ ಡೀಡ್ಸ್ 2016–2019 ರ ಸಾಲಿನಲ್ಲಿ ಗದಗ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಕಾನೂನು ಅರಿವಿನ ಕಾರ್ಯಕ್ರಮಗಳನ್ನು ಎತ್ತಿಕೊಂಡು ಅದನ್ನು ಯಶಸ್ವಿಯಾಗಿ ನಡೆಸಿತು. ಅಲ್ಲಿ ಗಳಿಸಿಕೊಂಡ ಸಮೃದ್ಧ ಅನುಭವದ ಹಿನ್ನೆಲೆಯಲ್ಲಿ 2020–2022ರ ಸಾಲಿನಲ್ಲಿ ಉತ್ತರ ಕನ್ನಡ, ಧಾರವಾಡ, ಬಾಗಲಕೋಟೆ, ಬಳ್ಳಾರಿ ಜಿಲ್ಲೆಗಳಲ್ಲಿ ಕಾನೂನು ಅರಿವಿನ ಕಾರ್ಯಕ್ರಮಗಳನ್ನು ನಡೆಸಲು ಯೋಜಿಸಿದೆ. ಈ ಕಾರ್ಯಕ್ರಮವನ್ನು ಸ್ಥಳಿಯ ಸ್ವಯಂಸೇವಾ ಸಂಸ್ಥೆಗಳು, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಪೂರಕ ಇಲಾಖೆಗಳು, ಪೂರಕ ಕಾನೂನು ಸುಗಮಕಾರರ ಸಹಭಾಗಿತ್ವದೊಂದಿಗೆ ನಡೆಸಲು ಯೋಜಿಸಲಾಗಿದೆ. ಈ ಯೋಜನೆಯಲ್ಲಿ ಐದು ಮುಖ್ಯ ಚಟುವಟಿಕೆಗಳಿವೆ.

### ಪೂರಕ ಕಾನೂನು ಸುಗಮಕಾರರ ತರಬೇತಿ



ಹಳ್ಳಿಗಳಲ್ಲಿ ಮಹಿಳೆಯರಿಗೆ, ಜನಸಾಮಾನ್ಯರಿಗೆ ಕಾನೂನು ಅರಿವಿನ ಕಾರ್ಯಕ್ರಮಗಳನ್ನು ನಡೆಸಲು ಸ್ಥಳೀಯ ಆಸಕ್ತ, 18 ರಿಂದ 50 ವರುಷದೊಳಗಿನ, ಕನಿಷ್ಠ 10ನೇ ತರಗತಿ ಪೂರೈಸಿದ, ಸ್ವಯಂಸೇವಾ ಸಂಸ್ಥೆ, ಯುವಕ/ಯುವತಿ ಮಂಡಲ, ಸ್ವಸಹಾಯ ಒಕ್ಕೂಟಗಳ ಪ್ರತಿನಿಧಿಗಳನ್ನು ಗುರುತಿಸಿ ಅವರಿಗೆ ಪೂರಕ ಕಾನೂನು ತರಬೇತಿಯನ್ನು ನೀಡಲಾಗುತ್ತದೆ. ತರಬೇತಿಯನ್ನು ನಾಲ್ಕು ದಿನಗಳಂತೆ ಮೂರು ಹಂತಗಳಲ್ಲಿ ನೀಡಲಾಗುತ್ತದೆ. ಮೊದಲ ಹಂತದಲ್ಲಿ ಮಹಿಳಾ ಸ್ಥಿತಿಗತಿ, ಲಿಂಗತ್ವ, ಸುಗಮಗಾರಿಕೆ ಕೌಶಲ, ನಾಯಕತ್ವ, ಲಿಂಗಸೂಕ್ಷ್ಮತೆಯಲ್ಲಿ ಸಿದ್ಧತೆ, ತಳಮಟ್ಟದ ಮಾಹಿತಿ ಕಾರ್ಯಕ್ರಮದ ಪ್ರಾತ್ಯಕ್ಷಿಕೆ ಈ ಮೊದಲಾದ ಮಾಹಿತಿಗಳನ್ನು ನೀಡಲಾಗುತ್ತದೆ. ಎರಡನೇ ಹಂತದಲ್ಲಿ ಸಂವಿಧಾನ, ಮಹಿಳಾ ಹಕ್ಕು/ಕಾನೂನುಗಳು (ಮುಖ್ಯವಾಗಿ ಬಾಲ್ಯವಿವಾಹ, ಕೌಟುಂಬಿಕ ದೌರ್ಜನ್ಯ, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ, ಮದುವೆ ನೋಂದಣಿ), ನ್ಯಾಯಾಲಯ ವೀಕ್ಷಣೆ, ಪೊಲೀಸ್ ಠಾಣೆ ವೀಕ್ಷಣೆ ಮೊದಲಾದ ಮಾಹಿತಿಗಳನ್ನು ನೀಡಲಾಗುತ್ತದೆ. ಮೂರನೇ ಹಂತದಲ್ಲಿ ಮಹಿಳಾ ಪ್ರಕರಣಗಳ ನಿರ್ವಹಣೆ, ಆಪ್ತ ಸಮಾಲೋಚನೆ, ದೂರು ಬರವಣಿಗೆ, ಎಫ್‌ಐಆರ್, ಡಿಐಆರ್, ಸಾಂತ್ವನ ಕೇಂದ್ರ–ಸಖಿ ಕೇಂದ್ರ ವೀಕ್ಷಣೆ ಮೊದಲಾದ ಚಟುವಟಿಕೆಗಳು ಇರುತ್ತವೆ. ಮೇಲ್ಕಂಡ ಪ್ರತೀ ಜಿಲ್ಲೆಯಲ್ಲಿ ಕನಿಷ್ಠ 40 ಮಂದಿ ತರಬೇತಿ ಹೊಂದಿದ ಪೂರಕ ಕಾನೂನು ಸುಗಮಕಾರರನ್ನು ತರಬೇತಿಗೊಳಿಸುವ ಯೋಜನೆಯಿದೆ. ಈ ಮೂಲಕ ನಾಲ್ಕು ಜಿಲ್ಲೆಗಳಲ್ಲಿ ಒಟ್ಟು 160 ಪೂರಕ ಕಾನೂನು ಸುಗಮಕಾರರ ತಂಡ ರಚನೆಯಾಗಲಿದೆ.

### ಪೂರಕ ಕಾನೂನು ಸುಗಮಕಾರರ / ಆಯ್ದ ಭಾಗಾರ್ಥಿಗಳ ಸಮಾವೇಶ

ತರಬೇತಿ ಪಡೆದ ಪೂರಕ ಕಾನೂನು ಸುಗಮಕಾರರು ತಮ್ಮ ತರಬೇತಿ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಿಕೊಳ್ಳಲು ಮತ್ತು ಆ ಪ್ರದೇಶದ ಜನರು



ತಿಳಿವಳಿಕೆಯನ್ನು ಹೊಂದಿ ಅವರು ತಮ್ಮ ಸುತ್ತಮುತ್ತಲಿನ ಸಮಸ್ಯೆಗಳಿಗೆ ಸ್ಪಂದಿಸುವಂತೆ ಅವರನ್ನು ಸಿದ್ಧಪಡಿಸಲು ತಳಮಟ್ಟದ ಮಾಹಿತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಕನಿಷ್ಠ 25 ಮಂದಿಗೊಂದರಂತೆ ಒಟ್ಟು 50 ಮಂದಿಗೆ ಎರಡು ಮಾಹಿತಿ ಕಾರ್ಯಕ್ರಮಗಳನ್ನು ಪ್ರತೀ ಹಂತದಲ್ಲಿ ಹಮ್ಮಿಕೊಳ್ಳಬೇಕಾಗುತ್ತದೆ. ಒಟ್ಟಿನಲ್ಲಿ ಒಂದು ಜಿಲ್ಲೆಯಲ್ಲಿ 80 ಕಾರ್ಯಕ್ರಮಗಳಂತೆ ನಾಲ್ಕು ಜಿಲ್ಲೆಗಳಲ್ಲಿ ಒಟ್ಟು 320 ಕಾರ್ಯಕ್ರಮಗಳು ನಡೆದು, ಅಂದಾಜು 8000 ಜನರು ನೇರವಾಗಿ ಮಾಹಿತಿ ಪಡೆಯಲಿದ್ದಾರೆ.

### ಮನೆ ಮನೆ ಮಾಹಿತಿ ಕಾರ್ಯಕ್ರಮ

ತಳ ಮಟ್ಟದ ಮಾಹಿತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಪ್ರತಿಯೊಬ್ಬ ಶಿಬಿರಾರ್ಥಿಯೂ ತಾನು ಕಲಿತ ಮಾಹಿತಿಯನ್ನು, ಪಡೆದ ಮಾಹಿತಿ ಸಾಮಗ್ರಿಗಳನ್ನು ತನ್ನ ಪ್ರದೇಶದ ಕನಿಷ್ಠ 10 ಮನೆಗಳಿಗೆ ಹಂಚಬೇಕು. ಅದರಂತೆ ಒಂದು ಜಿಲ್ಲೆಯಲ್ಲಿ 20,000 ಮನೆಗಳಂತೆ ನಾಲ್ಕು ಜಿಲ್ಲೆಗಳಲ್ಲಿ ಒಟ್ಟು 80,000 ಮನೆಗಳನ್ನು ತಲುಪಲು ಸಾಧ್ಯ.

### ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದೊಂದಿಗೆ ಸಹಭಾಗಿತ್ವ

ಹಿಂಸೆಯೊಂದಿಗೆ ಬದುಕುತ್ತಿರುವ ಮಹಿಳೆಯರಿಗೆ ಪ್ರತೀ ಜಿಲ್ಲೆಯಲ್ಲಿರುವ ಕಾನೂನು ಸೇವಾ ಪ್ರಾಧಿಕಾರಗಳು ಕಾಯ್ದೆಯಂತೆ ಉಚಿತ ನ್ಯಾಯಿಕ ಸೇವೆಯನ್ನು ನೀಡುವುದರೊಂದಿಗೆ ಕಾನೂನು ಮಾಹಿತಿ ಶಿಬಿರಗಳನ್ನು ಏರ್ಪಡಿಸುತ್ತವೆ. ಇವುಗಳು ಹೆಚ್ಚು ಹೆಚ್ಚು ನಡೆಯಲು, ಮೊಕದ್ದಮೆ ಹೂಡಿದ ಮಹಿಳೆಯರಿಗೆ ನ್ಯಾಯಯುತ ಪರಿಹಾರ ಸಿಗಲು ಮೇಲ್ಕಂಡ ಪ್ರಾಧಿಕಾರದೊಂದಿಗೆ ಸಹಭಾಗಿತ್ವವನ್ನು ಡೀಡ್ಸ್ ಯೋಜನೆಯ ಎಂಟು ಜಿಲ್ಲೆಗಳಲ್ಲಿ ನೀಡಲಿದೆ. ಜತೆಗೆ ಸ್ಥಳೀಯ ಸಹಭಾಗಿ ಸ್ವಯಂ ಸೇವಾ ಸಂಸ್ಥೆಗಳು, ಪೂರಕ ಕಾನೂನು ಸುಗಮಕಾರರ ಸಮುಚ್ಚಯಗಳು ಪ್ರಾಧಿಕಾರದೊಂದಿಗೆ ಕೈಜೋಡಿಸಲಿವೆ.

### ಪೂರಕ ಕಾನೂನು ಸುಗಮಕಾರರ/ ಆಯ್ದ ಭಾಗಾರ್ಥಿಗಳ ಸಮಾವೇಶ



ಮೂರು ಹಂತದ ಸುಗಮಕಾರರ ತರಬೇತಿ ಮತ್ತು ತಳ ಮಟ್ಟದ ಮಾಹಿತಿ ಕಾರ್ಯಕ್ರಮ ಮುಗಿದ ನಂತರ ಪ್ರತೀ ಜಿಲ್ಲೆಯಲ್ಲಿ ಎಲ್ಲಾ ಸುಗಮಕಾರರು ಮತ್ತು ಪ್ರತೀ ತಳಮಟ್ಟದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಶಿಬಿರಾರ್ಥಿಗಳಿಂದ ಆಯ್ದ 3-4 ಮಂದಿಯನ್ನು ಜಿಲ್ಲಾ ಮಟ್ಟದಲ್ಲಿ ಸೇರಿಸಿ ಸಮಾವೇಶ ನಡೆಯಲಿದೆ.

### ಜಿಲ್ಲಾ ಮತ್ತು ರಾಜ್ಯ ಮಟ್ಟದ ಪೂರಕ ಕಾನೂನು ಸುಗಮಕಾರರ ವೇದಿಕೆ

ಪೂರಕ ಕಾನೂನು ತರಬೇತಿ ಪಡೆದ ಸುಗಮಕಾರರು ಅವರದೇ ಆದ ವೇದಿಕೆಯನ್ನು ರಚಿಸಲು ಪ್ರೋತ್ಸಾಹಿಸಲಾಗುತ್ತದೆ. ಕೊಪ್ಪಳ, ಗದಗ, ಚಿತ್ರದುರ್ಗ, ಮಂಡ್ಯ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಧಾರವಾಡ, ಬಾಗಲಕೋಟೆ, ಬಳ್ಳಾರಿ ಜಿಲ್ಲೆಗಳ ಸುಗಮಕಾರರ ವೇದಿಕೆಗಳ ಆಯ್ದ ಪ್ರತಿನಿಧಿಗಳು ರಾಜ್ಯ ಮಟ್ಟದ ಸುಗಮಕಾರರ ವೇದಿಕೆಯನ್ನು ರಚಿಸುತ್ತಾರೆ. ಈ ವೇದಿಕೆ ಜಿಲ್ಲಾ ಮಟ್ಟದ ವೇದಿಕೆಗಳ ಉಸ್ತುವಾರಿ ವಹಿಸುವುದು ಅಲ್ಲದೆ ಮಹಿಳೆಯರ ಪ್ರಕರಣಗಳಿಗೆ ಸಂಬಂಧಿಸಿ ಬೆಂಬಲ ಮತ್ತು ಪೂರಕವಾಗಿ ಇಲಾಖೆಗಳೊಂದಿಗೆ ವಕಾಲತ್ತನ್ನು ಮಾಡುತ್ತದೆ. ಕಾನೂನು-ನ್ಯಾಯ ವ್ಯವಸ್ಥೆಯನ್ನು ಬಲಪಡಿಸಲು, ಪರಿಣಾಮಕಾರಿಯಾಗಿ ನಡೆಯುವಂತಾಗಲು ಸಂಬಂಧಪಟ್ಟ ರಾಜ್ಯ ಮಟ್ಟದ ಮತ್ತು ಜಿಲ್ಲಾ ಮಟ್ಟದ ಇಲಾಖೆಗಳೊಂದಿಗೆ ವ್ಯವಹರಿಸುತ್ತದೆ.

ಈ ಯೋಜನೆಯಲ್ಲಿ ಒಳಗೊಳ್ಳುವ ಸ್ವಯಂ ಸೇವಾ ಸಂಸ್ಥೆಗಳು, ಪೂರಕ ಕಾನೂನು ಸುಗಮಕಾರರು, ತಳ ಮಟ್ಟದ ಮಹಿಳೆಯರು, ಇಲಾಖೆಗಳು, ಎಲ್ಲಾ ಪ್ರಯೋಜನಾರ್ಥಿಗಳು-ಹೀಗೆ ಎಲ್ಲರ ಪ್ರೋತ್ಸಾಹ ನಮ್ಮೊಂದಿಗೆ ಇರಲಿ ಎಂಬುದೇ ನಮ್ಮ ಆಶಯ.

## ಕೋವಿಡ್-19 ಮತ್ತು ಜನಸಾಮಾನ್ಯರ ಬದುಕು

ಇಡೀ ವಿಶ್ವವನ್ನೇ ತಲ್ಲಣಗೊಳಿಸಿರುವ ಕೊರೋನಾ ವೈರಸ್ ಭೀತಿಯಿಂದ ಸಂಕಷ್ಟಕ್ಕೆ ಸಿಲುಕಿರುವ ಜನ ಸಾಮಾನ್ಯರ ಬದುಕು, ಅದರಲ್ಲೂ ಮಧ್ಯಮ ವರ್ಗದವರು, ವಲಸೆ ಕಾರ್ಮಿಕರ ಗೋಳು ಮುಗಿಲು ಮುಟ್ಟಿದೆ. ದೇಶದ ಕೋಟ್ಯಂತರ ಜನ ವಲಸೆ ಕಾರ್ಮಿಕರ ಸ್ಥಿತಿ ಆಯೋಮಯವಾಗಿದೆ. ಕೇಂದ್ರ ಸರ್ಕಾರ ಘೋಷಿಸಿದ ಅನಿರೀಕ್ಷಿತ ಲಾಕ್‌ಡೌನ್ ಜತೆಗೆ ಆರ್ಥಿಕ ಸಂಕಷ್ಟ ಅವರನ್ನು ಆಕ್ರೋಶಿತರನ್ನಾಗಿ ಮಾಡಿದೆ. ಸರಿಯಾದ ಕೆಲಸ ಕಾರ್ಯಗಳಿಲ್ಲ, ಕೈಯಲ್ಲಿ ಹಣವಿಲ್ಲ, ಭವಿಷ್ಯದ ಭದ್ರತೆಯಿಲ್ಲ, ಮುಂದೇನು ಎಂಬುದು ತಿಳಿದಿಲ್ಲ... ಹೀಗೆ ಎಲ್ಲಾ 'ಇಲ್ಲ' ಗಳು ಒಮ್ಮೆಲೇ ಬಂದೆರಗಿದಾಗ ಮನುಷ್ಯ ಧೃತಿಗೆಡುವುದು ಸಹಜ. ಮತ್ತು ಇದು ಹಲವಾರು ಮಾನಸಿಕ ಸಮಸ್ಯೆಗಳಿಗೆ ಕಾರಣವಾಗುವ ಸಾಧ್ಯತೆಗಳೂ ಇವೆ. ಲಾಕ್‌ಡೌನ್‌ನಿಂದ ದಿನಪೂರ್ತಿ ಮನೆಯಲ್ಲಿ ಕಳೆಯವ ಕೆಲವು ದಂಪತಿಗಳಲ್ಲಿ ಕಲಹ ಹಾಗೂ ಕೆಲವೊಂದಿಷ್ಟು ಹೆಣ್ಣುಮಕ್ಕಳ ಮೇಲೆ ದೈಹಿಕ ಹಾಗೂ ಮಾನಸಿಕ ದೌರ್ಜನ್ಯಗಳಂತಹ ಪ್ರಕರಣಗಳು ದೇಶದ ವಿವಿಧ ಭಾಗಗಳಲ್ಲಿ ನಡೆಯುತ್ತಿರುವುದು ವರದಿಯಾಗುತ್ತಲೇ ಇದೆ.

### ಏರಿಕೆಯಾದ ಕೌಟುಂಬಿಕ ಹಿಂಸಾಚಾರದ ದೂರುಗಳು

ದಿನಾಂಕ 22.06.2020 ರ 'ದಿ ಹಿಂದೂ' ದಿನಪತ್ರಿಕೆಯ ವರದಿ ಪ್ರಕಾರ ಕೋವಿಡ್- 19 ಸಂಬಂಧಿತ ಲಾಕ್‌ಡೌನ್‌ನ ಮೊದಲ ನಾಲ್ಕು ಹಂತದಲ್ಲಿ ಭಾರತೀಯ ಮಹಿಳೆಯರು ಅನುಭವಿಸಿದ ಕೌಟುಂಬಿಕ ಹಿಂಸಾಚಾರದ ದೂರುಗಳು ಹೆಚ್ಚಿನ ಸಂಖ್ಯೆಯಲ್ಲಿ ದಾಖಲಾಗಿವೆ. ಕಳೆದ 10 ವರ್ಷಗಳ ದಾಖಲೆಗಳನ್ನು ಪರಿಶೀಲಿಸಿದಾಗ ಲಾಕ್‌ಡೌನ್ ಸಮಯದಲ್ಲಿ ನಡೆದ ಹಿಂಸಾಚಾರದ ದೂರುಗಳು ಗರಿಷ್ಠ ಮಟ್ಟದಲ್ಲಿ ವರದಿಯಾಗಿವೆ. ದೆಹಲಿಯಲ್ಲಿ ಹತ್ತು ಲಕ್ಷ ಮಹಿಳೆಯರಲ್ಲಿ ಸುಮಾರು 32 ದೂರುಗಳನ್ನು ಸ್ವೀಕರಿಸಲಾಗಿದೆ. ಉತ್ತರ ಪ್ರದೇಶದಲ್ಲಿ ಹತ್ತು ಲಕ್ಷ ಮಹಿಳೆಯರಲ್ಲಿ ಸುಮಾರು 600 ದೂರುಗಳನ್ನು ಸ್ವೀಕರಿಸಲಾಗಿದೆ.

ಮಾರ್ಚ್ 25ರಿಂದ ಮೇ 31ರ ನಡುವೆ 1477 ಕೌಟುಂಬಿಕ

| ಹಿಂಸೆಯ ಪ್ರಕಾರ | ಯಾರಿಗೂ ತಿಳಿಸಿಲ್ಲ | ಕೆಲವರಿಗೆ ತಿಳಿಸಿದ್ದಾರೆ | ಸಹಾಯ ಕೋರಿದವರು |
|---|---|---|---|
| ದೈಹಿಕ | 79.5 | 9.0 | 11.6 |
| ಲೈಂಗಿಕ | 80.6 | 9.5 | 9.8 |
| ದೈಹಿಕ&ಲೈಂಗಿಕ | 61.3 | 9.9 | 28.8 |
| ಒಟ್ಟು | 76.6 | 9.1 | 14.3 |

ಹಿಂಸಾಚಾರದ ದೂರುಗಳು ಆತಂಕಕಾರಿಯಾಗಿ ಏರಿಕೆಯಾಗಿವೆ.

ಮೇಲ್ಕಂಡ ಅಂಕಿಅಂಶಗಳ ಪ್ರಕಾರ ದೈಹಿಕ ಮತ್ತು ಮಾನಸಿಕ ಹಿಂಸೆಯನ್ನು ಬಹುವಾಗಿ ಅನುಭವಿಸಿದ ಮಹಿಳೆಯರು ಅವರ ಕುಟುಂಬದವರಿಗೆ ಮಾತ್ರ ತಿಳಿಸಿದ್ದಾರೆ. ಆದರೆ ಯಾವುದೇ ಕಾನೂನು ನೆರವು ಪಡೆದಿಲ್ಲ. ಸಹಾಯ ಕೋರಿದ 14.3% ಬಾಧಿತರಲ್ಲಿ, ಕೇವಲ 9.1% ಮಾತ್ರ ಸಂಬಂಧಿತ ಅಧಿಕಾರಿಗಳಾದ ಪೊಲೀಸ್, ವೈದ್ಯರು, ವಕೀಲರು ಅಥವಾ ಸಾಮಾಜಿಕ ಸೇವಾ ಸಂಸ್ಥೆಗಳನ್ನು ಭೇಟಿಯಾಗಿದ್ದಾರೆ. ಹಿಂಸಾಚಾರ ಅನುಭವಿಸಿದ ಸುಮಾರು 76.6% ಮಹಿಳೆಯರು ಘಟನೆಯನ್ನು ಯಾರಿಗೂ ತಿಳಿಸದೆ ಮೌನವಾಗಿದ್ದಾರೆ. ಕೌಟುಂಬಿಕ ಹಿಂಸೆಗಳು ಮಹಿಳೆಯರು ಮತ್ತು ಮಕ್ಕಳ ಮೇಲೆ ಮಾನಸಿಕ ಪರಿಣಾಮಗಳನ್ನು ಉಂಟುಮಾಡುತ್ತವೆ. ಇದರಿಂದ ಹಲವರು ಖಿನ್ನತೆಗೆ ಒಳಗಾಗುತ್ತಾರೆ, ಆತ್ಮಹತ್ಯೆಗೂ ಪ್ರಯತ್ನಿಸಬಹುದು. ಹಾಗಾಗಿ ಯಾವುದೇ ತರಹದ ಹಿಂಸೆಗಳು ನಡೆದಾಗ ಸುಮ್ಮನಿರದೇ ಮನೆಯವರಲ್ಲಿ, ಸಂಬಂಧಿಕರಲ್ಲಿ, ನೆರೆಕರೆಯವರಲ್ಲಿ ಹೇಳಬೇಕು. ನಿಮ್ಮಲ್ಲಿ, ನಿಮ್ಮ ಬಳಗದವರಲ್ಲಿ, ನೆರೆಕರೆಯಲ್ಲಿ ಈ ರೀತಿಯ ಸಮಸ್ಯೆಗಳು ಕಂಡುಬಂದಲ್ಲಿ ತಕ್ಷಣವೇ ಪೊಲೀಸ್, ಸಾಂತ್ವನ ಕೇಂದ್ರಗಳಿಗೆ ಭೇಟಿ ನೀಡಿ ಹಿಂಸೆಯನ್ನು ಹೇಳಿಕೊಳ್ಳಬೇಕು. ಅವರು ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ. ಮಾನಸಿಕ ರೋಗ ಲಕ್ಷಣಗಳಿದ್ದಲ್ಲಿ ತಾಲೂಕು ಅಥವಾ ಜಿಲ್ಲಾ ಕೇಂದ್ರಗಳಲ್ಲಿರುವ ಸರಕಾರಿ/ಖಾಸಗಿ ಆಸ್ಪತ್ರೆಗಳಲ್ಲಿರುವ ಮಾನಸಿಕ ತಜ್ಞರನ್ನು ಭೇಟಿಯಾಗಬೇಕು.

### ಲಾಕ್‌ಡೌನ್ ಮತ್ತು ಸಮುದಾಯದತ್ತ ಡೀಡ್ಸ್ ಸ್ಪಂದನೆ

ಲಾಕ್‌ಡೌನ್ ಸಮಯದಲ್ಲಿ ಡೀಡ್ಸ್‌ನ ಕಾನೂನು ನೆರವು ಪಡೆಯುತ್ತಿದ್ದ, ತೀರಾ ಸಂಕಷ್ಟದಲ್ಲಿರುವ ಫಲಾನುಭವಿ ಮಹಿಳೆಯರ ಸಂಕಷ್ಟಗಳನ್ನು ವಿಚಾರಿಸಿ ಅವರಿಗೆ ಸಾಂತ್ವನ ನೀಡಲಾಯಿತು. ಅಂತಹ ಮಹಿಳೆಯರಿಗೆ 1700 ರೂಪಾಯಿ ಮೊತ್ತದ 50 ಆಹಾರ ಕಿಟ್‌ಗಳನ್ನು ವಿತರಿಸಲಾಯಿತು.



ಮಂಗಳೂರಿನ ಕುಡುಪು ಗ್ರಾಮದ 11 ಮಂದಿ ಸಮಾನ ಮನಸ್ಕರು 15 ದಿನಗಳ ಕಾಲ ಕುಡುಪು, ಪಾಲ್ದನೆ, ಪಿಲಿಕುಮೇರಿ, ನಡುಮನೆ, ನೆಕ್ಕರೆ ಮತ್ತು ಪ್ರಾದ್ ಕಾಲನಿಯ ಸುತ್ತುಮುತ್ತಲಲ್ಲಿ ಸರಿಸುಮಾರು 5-6 ಕಿ.ಮೀ. ಉದ್ದಗಲದಲ್ಲಿ ಮಾರ್ಚ್ 20 ರಿಂದ ಎಪ್ರಿಲ್ 22 ರವರೆಗೆ ಕಸವಿಂಗಡಣೆ, ಪ್ಲಾಸ್ಟಿಕ್ ಹೆಕ್ಕುವುದು, ರಸ್ತೆಯ ಸ್ವಚ್ಛತೆ, ನೆರೆಹೊರೆಯಲ್ಲಿ 280 ಕ್ಕೂ ಹೆಚ್ಚು ಮನೆಗಳಿಗೆ ಕೋವಿಡ್-19 ಮತ್ತು ಸ್ವಚ್ಛತೆಯ ಮಾಹಿತಿ ಮುಂತಾದ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಯಿತು. ಸುಮಾರು 50 ಆಹಾರ ಕಿಟ್‌ಗಳನ್ನು ಕುಡುಪು ಪ್ರದೇಶದ ಅರ್ಹರಿಗೆ ವಿತರಿಸಲಾಯಿತು. ಕುಡುಪುವಿನ ಸಮಾನ ಮನಸ್ಕರು, ಸಂವಾದ ಮತ್ತು ಡೀಡ್ಸ್‌ನ ಸಹಭಾಗಿತ್ವದಲ್ಲಿ ಈ ಚಟುವಟಿಕೆಗಳು ನಡೆದವು.

ದಕ್ಷಿಣ ಕನ್ನಡ ಜಿಲ್ಲೆಯ ಪೂರಕ ಕಾನೂನು ಸುಗಮಕಾರರು ಲಾಕ್‌ಡೌನ್ ಸಮಯದಲ್ಲಿ ಸ್ಥಳೀಯ ಕಾರ್ಪೋರೇಟರಿಗೆ ಮನವಿ ಮಾಡಿ ಹಸಿದವರಿಗೆ ಆಹಾರ ವ್ಯವಸ್ಥೆ ಮತ್ತು ಅಗತ್ಯ ಇರುವವರಿಗೆ ಔಷಧ ಮತ್ತು ತರಕಾರಿ ನೀಡಿದ್ದು ಓರ್ವ ಬಡ ಮಹಿಳೆಗೆ ಆಹಾರ ಸಾಮಗ್ರಿಗಳನ್ನು ತೆಗೆದುಕೊಡುವುದರ ಮೂಲಕ ಸಹಾಯ ಮಾಡಿರುತ್ತಾರೆ. ಪೌರ ಕಾರ್ಮಿಕರಿಗೆ ಮತ್ತು ಆಟೋ, ಬಸ್ ಡ್ರೈವರ್‌ಗಳಿಗೆ ಮಾಸ್ಕ್‌ನ್ನು ನೀಡಿ ಕೊರೋನಾ ಬಗ್ಗೆ ಮಾಹಿತಿಯನ್ನೂ ನೀಡಿರುತ್ತಾರೆ. ಅಲ್ಲದೆ ಮಂಗಳೂರಿನಲ್ಲಿರುವ ಪ್ರಾಣಿ ಸಂರಕ್ಷಣಾ ಕೇಂದ್ರಕ್ಕೆ ತಿಳಿಸಿ ಬೀದಿ ನಾಯಿಗಳಿಗೆ ಆಹಾರ ಸಿಗುವ ವ್ಯವಸ್ಥೆಯನ್ನು ಮಾಡಿರುತ್ತಾರೆ.

ಕೊಪ್ಪಳ ಜಿಲ್ಲೆಯಲ್ಲಿ ಅಲೆಮಾರಿ ಸಮುದಾಯಗಳು, ಮೋಚಿಗೆರಾ ಸಮುದಾಯಗಳು ಮತ್ತು ಹಳ್ಳಿ ಹಾಗೂ ನಗರ ಪ್ರದೇಶಗಳ ಗರ್ಭಿಣಿ,

ಬಾಣಂತಿ ಮಹಿಳೆಯರು ಮತ್ತು ಇತರ ಸಮುದಾಯಗಳಿಗೆ ಇದೇ ಜುಲೈ ತಿಂಗಳಿನಲ್ಲಿ ಸಹಜಾ ಟ್ರಸ್ಟ್, ಧ್ವನಿ ಸ್ವಯಂಸೇವಾ ಸಂಸ್ಥೆ, ಪೂರಕ ಕಾನೂನು ಸುಗಮಕಾರರ ಸಹಯೋಗದಲ್ಲಿ ಕೋವಿಡ್ ಜಾಗೃತಿ ಮತ್ತು ಮಾಸ್ಕ್ ಹಂಚಿಕೆ ಕಾರ್ಯಕ್ರಮವನ್ನು ಹಲವಾರು ಕಡೆ ಹಮ್ಮಿಕೊಳ್ಳಲಾಗಿತ್ತು. ಅಂಗನವಾಡಿ ಕಾರ್ಯಕರ್ತೆಯರು ಮಾಹಿತಿ ನೀಡಿದರು. ನೀರಿನ ಸಮಸ್ಯೆ, ಅಂಗನವಾಡಿಯಲ್ಲಿ ನೀಡುವ ಆಹಾರ ಧಾನ್ಯಗಳ ಸಮಸ್ಯೆಗಳನ್ನು ಮಹಿಳೆಯರು ವಿವರಿಸಿದರು. ಈ ಎಲ್ಲಾ ಸಮಸ್ಯೆಗಳ ನಿರ್ಮೂಲನೆಗೆ ಮಹಿಳೆಯರು ಸಂಘಟಿತರಾಗಿ ಪ್ರಶ್ನಿಸಬೇಕು, ನಿಮ್ಮೊಂದಿಗೆ ನಾವು ಇರುತ್ತೇವೆ ಎಂದು ಪೂರಕ ಕಾನೂನು ಸುಗಮಕಾರರಾದ ಶೀಲಾ ಹಾಲ್ಕುರಿಕೆಯವರು ಹೇಳಿದರು.

## ಪೂರಕ ಕಾನೂನು ಸುಗಮಕಾರರ ಸಮುಚ್ಚಯದ ಚಟುವಟಿಕೆಗಳು

ಕಳೆದ ವರುಷಗಳಲ್ಲಿ ತರಬೇತಿ ಪಡೆದ ಪೂರಕ ಕಾನೂನು ಸುಗಮಕಾರರು ಅವರವರ ಜಿಲ್ಲೆಗಳಲ್ಲಿ ಸುಗಮಕಾರರ ವೇದಿಕೆಯನ್ನು ರಚಿಸಿ ಸಭೆ, ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ.



### ಕೊಪ್ಪಳ ಜಿಲ್ಲಾ ಸುಗಮಕಾರರ ಸಮುಚ್ಚಯ

ಕೊಪ್ಪಳ ಜಿಲ್ಲೆಯ ಆಸಕ್ತ ಸುಗಮಕಾರರು ದಿನಾಂಕ 02.08.2020 ರಂದು ಅನೌಪಚಾರಿಕ ಗೂಗಲ್ ಸಭೆಯನ್ನು ನಡೆಸಿದರು. ಸಭೆಯಲ್ಲಿ ಕೊರೋನಾ ಸಂದರ್ಭದ ಚಟುವಟಿಕೆಗಳ ಮಾಹಿತಿ, ಜತೆಗೆ ಕೌಟುಂಬಿಕ ದೌರ್ಜನ್ಯದ ಘಟನೆಗಳನ್ನು ಹಂಚಿಕೊಂಡರು. ಸ್ಥಳೀಯ 10 ಕೌಟುಂಬಿಕ ಹಿಂಸೆಯ ಪ್ರಕರಣಗಳ ಅಧ್ಯಯನ ನಡೆಸಲು ನಿರ್ಧರಿಸಿದರು.

ಸುಗಮಕಾರರ ಸಮುಚ್ಚಯದ ಔಪಚಾರಿಕ ಸಭೆಯು ದಿನಾಂಕ 08.08.2020 ರಂದು ನಂದಿನಗರದ ವಿದ್ಯಾ ಸಂಸ್ಕೃತಿ ಶಾಲೆಯಲ್ಲಿ ನಡೆಯಿತು. 11 ಮಂದಿ ಸುಗಮಕಾರರು ಭಾಗವಹಿಸಿದ್ದರು. ಕೊರೋನಾ ಸಂದರ್ಭದಲ್ಲಿ ಸದಸ್ಯರ ಸಂಸ್ಥೆ ಮತ್ತು ವೈಯಕ್ತಿಕವಾಗಿ ಆಹಾರ ಕಿಟ್, ಮಾಸ್ಕ್‌ಗಳನ್ನು ಹಂಚಿದ್ದನ್ನು, ಕೊರೋನಾ ಬಗ್ಗೆ ಮಾಹಿತಿ ಕಾರ್ಯಕ್ರಮಗಳನ್ನು ನಡೆಸಿದ್ದನ್ನು ತಿಳಿಸಿದರು.

### ದಕ್ಷಿಣ ಕನ್ನಡ ಜಿಲ್ಲಾ ಸುಗಮಕಾರರ ಸಮುಚ್ಚಯ

ಸಮುಚ್ಚಯದ ಸಭೆಯು ದಿನಾಂಕ 13.08.2020ರಂದು ಡೀಡ್ಸ್ ಕಚೇರಿಯಲ್ಲಿ ನಡೆಯಿತು. ಏಳು ಮಂದಿ ಭಾಗವಹಿಸಿದ್ದರು. ಸುಗಮಕಾರರ ಸ್ವಸಹಾಯ ಗುಂಪಿನ ರಚನೆ, ಸದಸ್ಯತ್ವ ವಿಷಯಗಳ ಬಗ್ಗೆ ಮುಂದಿನ ತಿಂಗಳ ಸಭೆಯಲ್ಲಿ ಚರ್ಚಿಸಲು ನಿರ್ಧರಿಸಲಾಯಿತು.

### ಕರ್ನಾಟಕ ರಾಜ್ಯ ಪೂರಕ ಕಾನೂನು ಸುಗಮಕಾರರ ಸಮುಚ್ಚಯ

ಕರ್ನಾಟಕ ರಾಜ್ಯ ಪೂರಕ ಕಾನೂನು ಸುಗಮಕಾರರ ಸಮುಚ್ಚಯದ ಗೂಗಲ್ ಮೀಟ್ ಸಭೆಯು ದಿನಾಂಕ 14.08.2020 ಶುಕ್ರವಾರದಂದು ನಡೆಯಿತು. ಚಿತ್ರದುರ್ಗ, ಕೊಪ್ಪಳ, ಗದಗ, ಮಂಡ್ಯ, ದಕ್ಷಿಣ ಕನ್ನಡ ಜಿಲ್ಲೆಗಳ ಒಟ್ಟು ಒಂಬತ್ತು ಮಂದಿ ಸುಗಮಕಾರರು ಭಾಗವಹಿಸಿದ್ದರು. ಕೊರೋನಾ ಸಂದರ್ಭದಲ್ಲಿ ತಾವು ನಡೆಸಿದ ಚಟುವಟಿಕೆಗಳ ಬಗೆಗಿನ ಮಾಹಿತಿಯನ್ನು ಹಂಚಿಕೊಂಡರು. ಸಭೆಯಲ್ಲಿ ಡೀಡ್ಸ್ ನಿರ್ದೇಶಕಿ ಮರ್ಲಿನ್ ಮಾರ್ಟಿಸ್, ಕಾರ್ಯಕ್ರಮ ಸಂಯೋಜಕ ತುಕಾರಾಮ ಎಕ್ಕಾರು, ಸುಗಮಕಾರರಾದ ಪಿ ಎಮ್ ಸುಮಾ, ಗೀತಾ ಬಿ, ಎಚ್ ಮಲ್ಲಪ್ಪ, ನರಸಿಂಹರಾಜು, ಫಕ್ಕೀರಮ್ಮ ಎಸ್ ಲಕ್ಕುಂಡಿ, ಶೀಲಾ ಸಿ, ವತ್ಸಲಾ ನಾಯಕ್, ಹರಿಣಿ, ಭಾಗ್ಯಮ್ಮ ಕೆ ಭಾಗವಹಿಸಿದ್ದರು.

### ಸವಿನೆನಪು 1

ನನಗಂತೂ ಡೀಡ್ಸ್ ಎಂಬ ವಿಶ್ವ ವಿದ್ಯಾಲಯವನ್ನು ಮೂರು ವರ್ಷಗಳ ಹಿಂದೆ ಸೇರಿ ಈಗ ಹೊರಬಂದಂತೆ ಭಾಸವಾಗುತ್ತದೆ. ಅಪಾರವಾದ ಕಲಿಕೆಯೊಂದಿಗೆ ಶಿಸ್ತುಬದ್ಧವಾಗಿ, ನಿಸ್ವಾರ್ಥತೆಯಿಂದ, ಪಾರದರ್ಶಕವಾಗಿ, ಯೋಜನೆಯ ನಿಶ್ಚಿತ ಗುರಿ ತಲುಪಲು ಹೇಗೆಲ್ಲಾ ಕೆಲಸ ಮಾಡಬಹುದು ಎಂದು ಸ್ಪಷ್ಟವಾಗಿ ತಿಳಿದುಕೊಂಡೆ. ಉತ್ತಮ ಸಂವಹನ ಕೌಶಲ, ದಾಖಲೆಗಳ ನಿರ್ವಹಣೆ, ವರದಿಗಾರಿಕೆ, ಹೊಸ ಪ್ರಯತ್ನಗಳನ್ನು ಕಾರ್ಯಗತಗೊಳಿಸುವ ಕೌಶಲಗಳ ಕಲಿಕೆಯಾಗಿದೆ. ಸಮಸ್ಯೆಗಳಿಗೆ ಸ್ಪಂದಿಸುವ, ಸಲಹೆ ಮಾರ್ಗದರ್ಶನ ಮಾಡುವ ಸಾಮರ್ಥ್ಯ, ಧೈರ್ಯ ಬಂದಿದೆ. ನನಗೆ ಗದಗ ಜಿಲ್ಲಾ ಕಾರ್ಯಕ್ರಮ ಸಂಯೋಜಕಳಾಗಿ 2016–2019 ರಲ್ಲಿ ಕಾರ್ಯನಿರ್ವಹಿಸಲು ಆವಕಾಶ ಮಾಡಿಕೊಟ್ಟಿದ್ದಕ್ಕೆ ಧನ್ಯವಾದಗಳು.



**ಫಕ್ಕೀರಮ್ಮ ಲಕ್ಕುಂಡಿ**
ನಿಕಟಪೂರ್ವ ಜಿಲ್ಲಾ ಕಾರ್ಯಕ್ರಮ
ಸಂಯೋಜಕರು, ಗದಗ ಜಿಲ್ಲೆ

### ಸವಿನೆನಪು 2

ನಮ್ಮಲ್ಲಿ ಲಿಂಗತ್ವ, ಮಹಿಳಾ ಕಾನೂನಿನ ಅರಿವು ಮೂಡಿಸುವ ಸಂಸ್ಥೆಗಳು ಕಡಿಮೆ. ಕೊಪ್ಪಳದಲ್ಲಿ ಡೀಡ್ಸ್ ಹಮ್ಮಿಕೊಂಡ ಪೂರಕ ಕಾನೂನಿನ ತರಬೇತಿ, ತಳಮಟ್ಟದ ಮಾಹಿತಿ ಕಾರ್ಯಕ್ರಮ ಜನರನ್ನು ತಲುಪಿದೆ. ನನಗೂ ಈ ಮೂಲಕ ಕಾನೂನಿನ ಮಾಹಿತಿ ಸಿಕ್ಕಿದೆ. ಹಲವು ಸಂಘಸಂಸ್ಥೆಗಳ, ಕಾರ್ಯಕರ್ತರ ಪರಿಚಯವಾಗಿದೆ, ಸಂಬಂಧ ಬೆಳೆದಿದೆ ಸಂಸ್ಥೆಯಿಂದ ಉತ್ತಮ ಮಾರ್ಗದರ್ಶನ ಸಿಕ್ಕಿದೆ. ಹಲವು ಕೌಶಲಗಳಲ್ಲಿ ಪರಿಣತಿ ಪಡೆಯಲು ಸಾಧ್ಯವಾಯಿತು. ನನ್ನನ್ನು ಈ ಮಟ್ಟಕ್ಕೆ ಬೆಳೆಸಿದ ಡೀಡ್ಸ್ ಸಂಸ್ಥೆಗೆ ಮತ್ತು ಎಲ್ಲಾ ಸಿಬ್ಬಂದಿವರ್ಗದವರಿಗೆ ನನ್ನ ಧನ್ಯವಾದಗಳು.



**ಶರಣಪ್ಪ ಉಪ್ಪಾರ** ನಿಕಟಪೂರ್ವ ಜಿಲ್ಲಾ ಕಾರ್ಯಕ್ರಮ ಸಂಯೋಜಕರು, ಕೊಪ್ಪಳ ಜಿಲ್ಲೆ

### ಮಾನ್ಯತೆ



ಡೀಡ್ಸ್‌ನ ಆಡಳಿತ, ಹಣಕಾಸು ನಿರ್ವಹಣಾ ಕ್ಷೇತ್ರಗಳ ವೃತ್ತಿಪರತೆಯನ್ನು ಅವಲೋಕಿಸಿ ದೆಹಲಿಯ ಎಫ್‌ಎಮ್‌ಎಸ್‌ಎಫ್ ಮತ್ತು ಸಿಪಿಎ ಸರ್ವಿಸಸ್ ಪ್ರೈವೆಟ್ ಲಿ. ಸಂಸ್ಥೆಯು ಪ್ಲ್ಯಾಟಿನಂ ವರ್ಗದ ಮಾನ್ಯತೆಯನ್ನು ಡೀಡ್ಸ್ ಸಂಸ್ಥೆಗೆ ನೀಡಿದೆ ಎಂದು ತಿಳಿಸಲು ಹರ್ಷಿಸುತ್ತೇವೆ.

ಮುಖಪುಟ ವಿನ್ಯಾಸ: ಸುನೈಫ್ ವಿಟ್ಲ
ಮುದ್ರಣ: ಪಿಕ್ಸೆಲ್ಸ್ ಡಿಸೈನರ್ಸ್, ಕುದ್ರೋಳಿ, ಮಂಗಳೂರು

DEEDS SAMVAADA - A news letter by DEEDS, Mangalore

ವಿಳಾಸ : ಡೆವಲಪ್‌ಮೆಂಟ್ ಎಜುಕೇಶನ್ ಸರ್ವಿಸ್ (ಡೀಡ್ಸ್), ಆನಂದ ಅಪಾರ್ಟ್‌ಮೆಂಟ್ಸ್, ಕದ್ರಿ, ಮಂಗಳೂರು, ದ.ಕ. 575002, ದೂರವಾಣಿ: 0824–2217022, 4281037
E-mail : deeds82@rediffmail.com